ದಿನಾಂಕಃ 02.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ ಟಿ.ಎ. ವಕೀಲರಿಂದ:</u>**

1 ನೇ ಪ್ರತಿವಾದಿ ನನ್ನ ತಂದೆಯವರು. ನನ್ನ ತಂದೆಗೆ ಸ.ನಂ.406 ರಲ್ಲಿ 1 ಎಕರೆ 8 ಗುಂಟೆ, 407/4 ರಲ್ಲಿ ಹಳೇ ಸ.ನಂ.407/2 ರಲ್ಲಿ 15 ಗುಂಟೆ ಜಮೀನಿರುತ್ತದೆ. ಪ್ರಸ್ತುತ ದಾವೆಯು 407/4 ಅಂದರೆ ಹಳೇ ಸ.ನಂ.407/2 ರಕ್ಕೆ ಸಂಬಂಧಪಟ್ಟಂತೆ ದಾಖಲಿಸಲಾಗಿರುತ್ತದೆ. ನನ್ನ ತಂದೆ ಅವರ ದೈನಂದಿನ ಕಾರ್ಯಾಗಳನ್ನು ಅವರೇ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಹಾಗೆಯೇ ಬ್ಯಾಂಕ್ ವ್ಯವಹಾರವನ್ನೂ ಸಹಾ ಅವರೇ ಖುದ್ದು ಮಾಡಿಕೊಳ್ಳುತ್ತಾರೆ. ಆದರೆ ಕೋರ್ಟ್ ಕಛೇರಿ ವಿಚಾರಕ್ಕೆ ಸಂಬಂಧಪಟ್ಟಂತ ನನ್ನ ತಂದೆಯವರು ಹೋಗಿರುವುದಿಲ್ಲ, ಸಾಕ್ಷಿಯು ಮುಂದುವರೆದು ಆಧಾರ್ ಕಾರ್ಡ್ ತಿದ್ದುಪಡಿ ವಿಚಾರಕ್ಕೆ ಕುರಿತಂತೆ ಅವರು ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡಿದ ನಂತರ ವಾದಿಯು ಜನನ ಪ್ರಮಾಣ ಪತ್ರವನ್ನು ಕೋರಿ ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆಗಲೂ ನಾನೇ ಅವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಆರಾಮಾಗಿ ಓಡಾಡುತ್ತಾರೆ ಆದರೆ ಅವರಿಗೆ ಮೂಳೆ ಸವೆತ ಮತ್ತು ಅವರಿಗೆ ಸ್ವಲ್ಪ ದೂರದ ಮಾತುಗಳು ಕೇಳುವುದಿಲ್ಲ ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆಯೂ ಆಗಿರುತ್ತದೆ. ನನ್ನ ತಂದೆಗೆ ಆರೋಗ್ಯ ಸರಿ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ತಂದೆಯ ಹೆಸರಿನಲ್ಲಿರುವ ಎರಡೂ ಸ.ನಂ. ಜಮೀನುಗಳಿಗೆ ಕುರಿತಂತೆ ಅಧಿಕಾರ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಾನು ಅಧಿಕಾರ ಪತ್ರವನ್ನು ಪಡೆಯುವ ಕಾಲಕ್ಕೆ ಹೊಸ ಸ.ನಂ. ನೀಡಲಾಗಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಪಹಣಿಯನ್ನು ಕೇಳಿರುವುದಿಲ್ಲ ಆದರೆ ಫಾರ್ಮ್ ನಂ.10 ಪತ್ರವನ್ನು ಹಾಜರುಮಾಡಲಾಗಿರುತ್ತದೆ. ನೀವು ಉದ್ದೇಶಪೂರ್ವಕವಾಗಿ ನಿಮ್ಮ ಅಧಿಕಾರ ಪತ್ರದಲ್ಲಿ ತಪ್ಪು ಸ.ನಂ. ಅನ್ನು ನಮೂದುಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ನನ್ನ ತಂದೆಯ ಅಂದರೆ ಪ್ರಸ್ತುತ ದಾವದ ವಾದಿಯ ಹೆಸರಿಗೆ ಸಂ.ನಂ.407/2 ರಲ್ಲಿ ಒಟ್ಟು 21 ½ ಗುಂಟೆ ಮಂಜೂರು ಆಗುತ್ತದೆ, ಅಪ್ಪುಗೌಡ ಬಿನ್ ಕಾಳೇಗೌಡ ರವರಿಗೂ ಸಹಾ 21 ½ ಗುಂಟೆ ಮಂಜೂರಾಗುತ್ತದೆ. ನನ್ನ ತಂದೆಗೆ ಮಂಜೂರಾದ ಜಮೀನಾದ 407/2 ರಲ್ಲಿ ಒಟ್ಟು 21 ಗುಂಟೆ ಕರಾಬು ಅದರಲ್ಲಿ 5 ಗುಂಟೆ ನಮ್ಮ ಮನೆ ಕರಾಬು ಮತ್ತು ಇನ್ನೊಬ್ಬರ ಮನೆ 3 ಗುಂಟೆ ಮತ್ತು 13 ಗುಂಟೆ ಕಳಸ ಕುದುರೆಮುಖ ರಸ್ತೆ ಕರಾಬು. ಸ.ನಂ.407/4 ರಲ್ಲಿ ರಸ್ತೆ ಬಗೆಗಿನ 13 ಗುಂಟೆ ಕರಾಬು ಮತ್ತು 5 ಗುಂಟೆ ಕರಾಬು ಮನೆ ಬಗೆ ಕಳೆಯಲಾಗಿತ್ತು. ನಮ್ಮ ಜಮೀನಿನಲ್ಲಿ ಪಿಳ್ಳೆ ಕಾಲುವೆ ಇರುವುದಿಲ್ಲ. ಪ್ರಸ್ತುತ ದಾವೆಯನ್ನು ಎದುರುದಾರರ ವಿರುದ್ಧ ರಸ್ತೆಯನ್ನು ನಿರ್ಮಿಸಬಾರದು ಎಂದು ನಿರ್ಬಂದಕಾಜ್ಞೆಯನ್ನು ಕೋರಿ ದಾಖಲಿಸಲಾಗಿರುತ್ತದೆ. ಸ.ನಂ.407/2 ಕ್ಕೆ ಸಂಬಂಧಿಸಿದಂತೆ ಯಾವುದೇ ಕರಾಬು ಉತಾರು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ಅ.ದಾ. 173/2020 ಪಿಡಬ್ಲ್ಯೂ-1

**<u>ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.